## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 645/2023

**ಸಾಕ್ಷಿಯನ್ನು ದಿಃ 08.06.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಡಾ. ಉಮೇಶ್ | ಸಿಡಬ್ಲ್ಯೂಃ 16 | ಪಿಡಬ್ಲ್ಯೂಃ 8 |
| ತಂದೆಯ ಹೆಸರು | ಬೋರಯ್ಯ | | |
| ವಯಸ್ಸು | 48 ವರ್ಷ | | |
| ಕೆಲಸ | ವೈದ್ಯಾಧಿಕಾರಿ ಸಾರ್ವಜನಿಕ ಆಸ್ಪತ್ರೆ, ಹುಣಸೂರು | | |
| ವಾಸಸ್ಥಳ | ಹುಣಸೂರು | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ನಾನು 04.08.2017 ರಿಂದ ಇಲ್ಲಿಯವರೆಗೂ ಹುಣಸೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 05.09.2023 ರಂದು ಸಂಜೆ 7.05 ಕ್ಕೆ ಚಾಸಾ-3 ರವರು ಅದೇ ದಿನ ಸಂಜೆ 7 ಗಂಟೆಗೆ ಅಪಘಾತಕ್ಕೆ ಒಳಪಟ್ಟ ಹಿನ್ನೆಲೆಯಲ್ಲಿ ನನ್ನ ಮುಂದೆ ಹಾಜರಾಗಿದ್ದು ಅವರನ್ನು ಪರೀಕ್ಷಿಸಿದಾಗ ಈ ಕೆಳ ಕಂಡ ಗಾಯಗಳು ಕಂಡು ಬಂದಿರುತ್ತವೆ.

1. ಗಾಯಾಳು ಅರೆಪ್ರಜ್ಞಾವಸ್ಥೆಯಲ್ಲಿದ್ದರು.
2. ನಾಲಿಗೆಗೆ ಗಾಯವಾಗಿತ್ತು.
3. ತಲೆಯ ಎಡಭಾಗದಲ್ಲಿ ರಕ್ತ ಹೆಪ್ಪುಗಟ್ಟಿದ ಗಾಯವಿತು.

ಪ್ರಥಮ ಚಿಕಿತ್ಸೆಯನ್ನು ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಗಾಯಾಳುವನ್ನು ಕೆ.ಆರ್. ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದೇನೆ. ಸದರಿ ಗಾಯಾಳು CSI, Wordsworth memorial, ಆಸ್ಪತ್ರೆ ಮೈಸೂರಿನಲ್ಲಿ ಚಿಕಿತ್ಸೆ ಗೆ ದಾಖಲಾಗಿ ದಃ 10.09.2023 ರಂದು ಸದರಿ ಆಸ್ಪತ್ರೆಯಿಂದ ಬಿಡುಗಡೆಗೊಂಡಿರುತ್ತಾರೆ. ಸದರಿ ಗಾಯಾಳುವನ್ನು ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡುವಾಗ C-T Brain ಚಿಕಿತ್ಸೆಗೆ ಒಳಪಡಿಸಿದಾಗ, ಮೆದುಳಿನ ಎಡಭಾಗದಲ್ಲಿ 2 cm ಅಳತೆಯ ಗಾಯವಾಗಿತ್ತು. ಮತ್ತು ಮೆದುಳು ಊದಿಕೊಂಡಿತ್ತು , ಮೆದುಳಿನ ಎಡಭಾಗದ ಮೂಳೆಗೆ ಮುರಿತದ ಗಾಯವಾಗಿತ್ತು.

ತಲೆಯ ಹಿಂಭಾಗದ ಎಡಭಾಗದ ಮೂಳೆಗೆ ಮುರಿತದ ಗಾಯವಾಗಿತ್ತು. ತಲೆಯ ಹಿಂಭಾಗದ ಎಡಭಾಗದಲ್ಲಿ ರಕ್ತ ಹೆಪ್ಪು ಗಟ್ಟಿದ ಗಾಯವಾಗಿತ್ತು. ಸದರಿ C-T Brain ವರದಿಯ ಆಧಾರದ ಮೇರೆಗೆ ಮೇಲೆ ಹೇಳಿದ ಗಾಯಗಳು ತೀವ್ರ ಸ್ವರೂಪದ ಗಾಯಗಳೆಂದು ಅಭಿಪ್ರಾಯಪಟ್ಟಿರುತ್ತೇನೆ. ಆ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು, ಅದನ್ನು ಈಗ ನೋಡುತ್ತಿದ್ದು ನಿಪಿ-15 ಎಂದು, ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ.ಎ.ಎಸ್.ಎಂ ವಕೀಲರಿಂದಃ</u>**

ಗಾಯಾಳುವಿನ ಜೊತೆ ಅವರ ಸಂಬಂಧಿ ಎಂದು ರವಿ ಎಂಬುವವರು ಬಂದಿದ್ದರು. ನ್ಯಾಯಾಲಯದ ಮುಂಭಾಗ ಅಪಘಾತವಾಗಿದೆ ಎಂದು ಸದರಿ ರವಿ ರವರು ನನಗೆ ಮಾಹಿತಿ ಕೊಟ್ಟರು. ಗಾಯಾಳು ನಿಮ್ಮ ಮುಂದೆ ಬಂದಾಗ ಅವರಿಗೆ ತೀವ್ರ ಸ್ವರೂಪದ ಗಾಯವಾಗಿತ್ತೆ ಎಂದರೆ ಆ ಸಮಯದಲ್ಲಿ ನನಗೆ ಆ ಬಗ್ಗೆ ಹೇಳಲು ಸಾಧ್ಯವಾಗಲಿಲ್ಲ, ಕಾರಣ ಮುಂದಿನ ಚಿಕಿತ್ಸೆಯ ಅಗತ್ಯವಿದ್ದುದರಿಂದ ಕೆ.ಆರ್ ಆಸ್ಪತ್ರೆಗೆ ಹೋಗುವಂತೆ ಕಳುಹಿಸಿದ್ದೆ. ಸದರಿ ಗಾಯಾಳುವನ್ನು ನಾನು ಪರೀಕ್ಷಿಸಿದಾಗ ಅವರ ತಲೆಗೆ ಮತ್ತು ಮಿದುಳಿಗೆ ಗಾಯವಾಗಿರುವ ಸಾಧ್ಯತೆ ಇತ್ತು. ಆದ್ದರಿಂದ ಹೆಚ್ಚಿನ ಚಿಕಿತ್ಸೆಯ ಅಗತ್ಯವಿತ್ತು. ಈ ಕೇಸಿಗೆ ಸಂಬಂಧಿಸಿದಂತೆ ಆ ದಿನ ಚಾಸಾ-3 ಮಾತ್ರ ನನ್ನ ಬಳಿ ಚಿಕಿತ್ಸೆಗೆ ಬಂದಿದ್ದರು. ಚಾಸಾ-3 ರವರು ನನ್ನ ಮುಂದೆ ಯಾವುದೇ ಚಿಕಿತ್ಸೆಗೆ ಹಾಜರಾಗಿಲ್ಲ ನಾನು ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ-1 ರವರಿಗೆ ಯಾವುದೇ ಚಿಕಿತ್ಸೆ ನೀಡಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.